ಗೌಪ್ಯವಾಗಿ. ತನ್ನ ಅಪ್ಪ ಡಿಕ್ಯಾಸ್ಟ್ರೊನಿಂದ ಬಂದ ಆಸ್ತಿ ಮತ್ತು ಇಂಡಿಯಾದಲ್ಲಿ ತನಗೆ ಲಭ್ಯವಾದ ಆಸ್ತಿಗೆ ವಾರಸುದಾರರು ಬೇಕೆಂದು ನನ್ನನ್ನು ಗೋಗರೆದು ನೀನು ಹುಟ್ಟಲು ಕಾರಣರಾದರೂ ಮತ್ತು ನಿಮ್ಮಪ್ಪ ರಾಬರ್ಟ್ ನಮ್ಮ ಸಂಬಂಧ ಗೊತ್ತಿದ್ದರೂ ಸುಮ್ಮನೆ ಇದ್ದರು. ನಿಮ್ಮ ತಾತ ನನ್ನನ್ನು ಸಂಗಾತಿಯಂತೆಯೇ ಬಳಸಿಕೊಂಡರು. ಆತ ಎಲ್ಲಾ ವಿಷಯಗಳಲ್ಲಿಯೂ ಬಹಳ ಬಲಿಷ್ಠನಾಗಿದ್ದ. ಅಂಥ ಬಲಿಷ್ಠನ ಹೊಟ್ಟೆಯಲ್ಲಿ ಹುಟ್ಟಿದ ನಿಮ್ಮಪ್ಪ ಇಂಪೋಟೆಂಟ್ ಹೇಗಾದರೆಂಬುದು ನನಗೆ ಅರ್ಥವಾಗದ ಸಂಗತಿ. ಹಾಗಾಗಿ, ನಿನ್ನ ಹುಟ್ಟಿನ



ನಾಟಕದ ಭಾರವನ್ನು ಅನ್ನವರಂನ ಸತ್ಯನಾರಾಯಣ ಸ್ವಾಮಿಯ ಮೇಲೆ ಹಾಕಬೇಕಾಯಿತು'' ಎಂದವಳು ಶ್ರಾದ್ಧವನ್ನು ನಾನೇ ಮಾಡಬೇಕೆಂದು, ಹಾಗೆಯೇ ಅನ್ನವರಂನ ಸತ್ಯನಾರಾಯಣ ಸ್ವಾಮಿಯ ಕ್ಷಮೆ ಕೇಳಿ ತಪ್ಪು ಕಾಣಿಕೆ ಹಾಕಿ ಬರಬೇಂದು ಕೇಳಿಕೊಂಡಳು. ಹಾಗಾಗಿ, ಬಂದು ಬಿಟ್ಟೆ. ಮತ್ತೆ ನಾನಾಗಿ ನಾನೇ ಬಂದು ನಿನ್ನನ್ನು ಕಾಣುವವರೆಗೂ ನನ್ನ ತಂಟೆಗೆ ಬರಬೇಡ'' ಎಂದು ಹೇಳಿ ನನ್ನ ಕೈಕುಲುಕಿ ಕಾರು ಹತ್ತಿದ್ದ. ನಾನು ದಿಗ್ಮೂಢನಾಗಿ ನಿಂತಿದ್ದೆ. ಡಿಕ್ಯಾಸ್ಟ್ರೊನನ್ನು ಮತ್ತೊಮ್ಮೆ ಡಿಸ್ಟರ್ಬ್ ಮಾಡಬಾರದೆಂದು ತೀರ್ಮಾನಿಸಿದೆ. ಅವನು ಅನ್ನವರಂನಿಂದ ರಾಜಮಂಡ್ರಿಗೆ ಬಾರದೆ, ಕಾರು ಮಾಡಿಕೊಂಡು ಹೈದರಾಬಾದಿಗೆ ಹೊರಟಿದ್ದಾಗಿ ಅನ್ನವರಂನ ಎ.ಸಿ.ಪಿ ಮಾರನೆಯ ದಿನ ಬೆಳಗ್ಗೆ ಹನ್ನೊಂದು ಗಂಟೆಗೆ ಫೋನ್ ಮೂಲಕ ತಿಳಿಸಿದ್ದರು.

ಕಣ್ಣ ಮುಂದೆ ಇಲ್ಲದ ಸಂಗತಿಗಳು ಮನದಲ್ಲೂ ಮಬ್ಬಾಗಿಬಿಡುತ್ತವೆ ಎಂಬಂತೆ ನನ್ನ ಕೆಲಸಗಳ ಒತ್ತಡದಲ್ಲಿ ಡಿಕ್ಯಾಸ್ಟ್ರೊನ ಬಗ್ಗೆ ಯೋಚಿಸುವುದು ಕಡಿಮೆಯಾಗಿತ್ತು. ನಾನೂ, ನನ್ನ ಹೆಂಡತಿ ಆಗಾಗ್ಗೆ ಅವನ ವಿಷಯವನ್ನು ಮಾತನಾಡಿಕೊಳ್ಳುತ್ತಿದ್ದೆವು. ಯಾವಾಗಲಾದರೊಮ್ಮೆ ಲಂಡನ್ನಿಗೂ ಹೋಗಿ ಅವನ ಸಾಮ್ರಾಜ್ಯವನ್ನು ನೋಡಿ ಬರಬೇಕೆಂದುಕೊಂಡೆವು. ಅದಕ್ಕಿಂತಲೂ ಮಿಗಿಲಾಗಿ ಚಿಕ್ಕಮಗಳೂರಿನ ಎಡ್ವರ್ಡ್ ಎಸ್ಟೇಟ್‌ಗೆ ಡಿಕ್ಯಾಸ್ಟ್ರೊನ ಜೊತೆಯಲ್ಲಿ ಹೋಗಿ ಅಲ್ಲೆಲ್ಲ ತಿರುಗಾಡಿಕೊಂಡು ಬಾಲ್ಯದ ನೆನಪುಗಳಲ್ಲಿ ಮುಳುಗಿಹೋಗಬೇಕೆಂದು ತೀರ್ಮಾನಿಸಿದ್ದೆವು. ಆದರೆ, ಅಷ್ಟೇ ಸಡನ್ನಾಗಿ ಅವನು ಕಡೆಯದಾಗಿ ತನ್ನ ತಾತ ಮತ್ತು ಅಪ್ಪ ಎಡ್ವರ್ಡ್ ಬಗ್ಗೆ ಹೇಳಿದ ಮಾತುಗಳು ನನ್ನನ್ನು ತಲ್ಲಣಕ್ಕೆ ದೂಡುತ್ತಿದ್ದವು. ಅವನು ಹೇಳಿದ ಸತ್ಯವನ್ನು ನನ್ನ ಹೆಂಡತಿ ಸುಮತಿಗೆ ಹೇಳಲು ನನಗೆ ಮನಸ್ಸಾಗಿರಲಿಲ್ಲ. ಡಿಕ್ಯಾಸ್ಟ್ರೊ ಬಂದು ಹೋಗಿ ಮೂರು ತಿಂಗಳಾಗಿತ್ತೇನೋ; ಅಂಥ ಒಂದು ದಿನ ಬೆಳಗ್ಗೆ ಸುಮಾರು ಹನ್ನೊಂದು ಗಂಟೆಗೆ ಪಿ.ಎ ಇಂಟರ್ ಕಾಮ್ ಮೂಲಕ ಮಾತನಾಡಿ ಬನಾರಸಿನ ಎಸ್.ಪಿ ಆಫೀಸಿನಿಂದ ಫೋನ್ ಬಂದಿರುವುದಾಗಿ, ಖುದ್ದು ಎಸ್‌ಪಿಯವರೇ ಮಾತನಾಡುತ್ತಿರುವರೆಂದು ಫೋನ್ ಕನೆಕ್ಟ್ ಮಾಡಿದ್ದರು. ''ಹಲೋ ಗುಡ್ ಮಾರ್ನಿಂಗ್...'' ಎಂದಿದ್ದೆ. ''ಹಲೋ ವೆರಿಗುಡ್ ಮಾರ್ನಿಂಗ್, ಸಾರಿ ಟು ಡಿಸ್ಟರ್ಬ್ ಯು ಸರ್. ಡಿಕ್ಯಾಸ್ಟ್ರೊ ಅಂತ ವಾರದ ಹಿಂದೆ ಲಂಡನ್ನಿನಿಂದ ಬಂದು ಇಲ್ಲಿ ಗಂಗಾ ನದಿಯ ದಡದಲ್ಲೆ ಇರುವ ಬ್ರಿಜ್ ರಾಮ್ ಪ್ಯಾಲೇಸ್ ಎಂಬ ಫೈವ್ ಸ್ಟಾರ್ ಹೋಟೆಲಿನಲ್ಲಿ ಉಳಿದುಕೊಂಡಿದ್ದರು. ಬೆಳಗ್ಗೆ ಎಂಟು ಗಂಟೆಗೆ ಹೋಟೆಲ್ ಮುಂದೆಯೇ ಗಂಗಾ ನದಿಗೆ ಹಾರಿದ್ದಾರೆ. ಇಲ್ಲಿನ ದೋಣಿ ನಡೆಸುವವರು ಹೇಳುವ ಪ್ರಕಾರ